

ಭಾರತಕ್ಕೆ ಮೊದಲ ವಿದ್ಯುತ್‌ಚಾಲಿತ ಕಾರು ಕಾಲಿಟ್ಟದ್ದು 2002ರಲ್ಲಿ ಬೆಂಗಳೂರು ಮೂಲದ ರೇವಾ ಕಂಪೆನಿಯಿಂದ. 2010ರಲ್ಲಿ ಆ ಕಂಪೆನಿಯನ್ನು ಮಹೀಂದ್ರಾ ಆ್ಯಂಡ್ ಮಹೀಂದ್ರಾ ಖರೀದಿಸಿತು. ಮಹೀಂದ್ರಾ ಈ ಕಾರಿನಲ್ಲಿ ಸಾಕಷ್ಟು ಸುಧಾರಣೆಗಳನ್ನು ಮಾಡಿದೆ. ಒಮ್ಮೆ ಚಾರ್ಜ್ ಮಾಡಿದರೆ ಸುಮಾರು ನೂರು ಕಿ,ಮೀ ಓಡುವ ವಿದ್ಯುತ್ ಕಾರುಗಳು ಬಂದಿವೆ. ಇ20, ಇ–ವೆಂಟೊ ಮತ್ತು ಇವ–ಸುಪ್ರೊ ಮೂರು ಮಾದರಿಯಲ್ಲಿ ಈ ಕಾರುಗಳು ಲಭ್ಯವಿವೆ. ಆದರೆ ಕಾರಿನ ಬೆಲೆಯೂ ಏರಿಕೆಯಾಗಿದ್ದು 10 ಲಕ್ಷ ರೂಪಾಯಿ ಆಸುಪಾಸಿನಲ್ಲಿದೆ.



ರಷ್ಟು ಮಾತ್ರ ಬ್ಯಾಟರಿ, ಫ್ಯೂಯೆಲ್ ಸೆಲ್ ಅಥವಾ ಹೈಬ್ರಿಡ್ ಎಂಜಿನ್‌ಗಳನ್ನು (ಬ್ಯಾಟರಿ ಮತ್ತು ಪೆಟ್ರೋಲ್/ಡೀಸೆಲ್) ಹೊಂದಿವೆ.

ವಾಹನಗಳು ಉಂಟು ಮಾಡುತ್ತಿರುವ ಪರಿಸರ ಮಾಲಿನ್ಯವನ್ನು ತಡೆಯುವ ನಿಟ್ಟಿನಲ್ಲಿ, ಜಗತ್ತಿನ ಬಹುತೇಕ ಅಟೊಮೊಬೈಲ್ ಕಂಪೆನಿಗಳು ಈಗ ವಿದ್ಯುತ್ ಚಾಲಿತ ವಾಹನಗಳನ್ನು ಉತ್ಪಾದಿಸುವತ್ತ ಚಿತ್ತ ಹರಿಸುತ್ತಿವೆ. ಹಲವು ದೇಶಗಳಲ್ಲಿ ಸರ್ಕಾರಗಳೇ ಮುಂದೆ ನಿಂತು ವಿದ್ಯುತ್ ಚಾಲಿತ ವಾಹನಗಳ ಸಂಖ್ಯೆಯನ್ನು ಹೆಚ್ಚಿಸಲು ವಿಶೇಷ ಪ್ರೋತ್ಸಾಹ ಕ್ರಮಗಳನ್ನು ರೂಪಿಸುತ್ತಿವೆ.

ಜಗತ್ತಿನಲ್ಲೇ ಅತಿದೊಡ್ಡ ಕಾರು ಮಾರುಕಟ್ಟೆಯನ್ನು ಹೊಂದಿರುವ ದೇಶ ಚೀನಾ. ಕಳೆದ ವರ್ಷ ಚೀನಾ ದೇಶವೊಂದರಲ್ಲೇ 2.8 ಕೋಟಿ ವಾಹನಗಳು ಮಾರಾಟವಾಗಿವೆ. (ಜಗತ್ತಿನ ಒಟ್ಟು ಮಾರಾಟ 9.4 ಕೋಟಿಯಲ್ಲಿ ಚೀನಾದ್ದೇ ಸಿಂಹಪಾಲು.) 'ಚೀನಾದಲ್ಲಿ ಎಲ್ಲ ರೀತಿಯ ಪೆಟ್ರೋಲ್ ಮತ್ತು ಡೀಸೆಲ್‌ಚಾಲಿತ ವಾಹನಗಳ ಉತ್ಪಾದನೆಯನ್ನು ಶೀಘ್ರವೇ ನಿಷೇಧಿಸುವುದನ್ನು ಸರ್ಕಾರ ಪರಿಶೀಲಿಸುತ್ತಿದೆ' ಎಂದು ಅಲ್ಲಿನ ಸಚಿವರು ಕಳೆದ ವಾರ ಪ್ರಕಟಿಸಿದ್ದಾರೆ. ಫ್ರಾನ್ಸ್ ಮತ್ತು ಬ್ರಿಟನ್ ಸರ್ಕಾರಗಳೂ ಇದೇ ಹಾದಿಯಲ್ಲಿ ಸಾಗಿವೆ. '2040 ಒಳಗೆ ಎಲ್ಲ ಡೀಸೆಲ್ ಮತ್ತು ಪೆಟ್ರೋಲ್ ಕಾರು ಮತ್ತು ವ್ಯಾನ್‌ಗಳ ಮಾರಾಟವನ್ನು ಸಂಪೂರ್ಣ ನಿಲ್ಲಿಸಬೇಕು' ಎಂದು ಅಟೊಮೊಬೈಲ್ ಕಂಪೆನಿಗಳಿಗೆ ಫ್ರಾನ್ಸ್ ಮತ್ತು ಬ್ರಿಟನ್ ಸರ್ಕಾರಗಳು ಫರ್ಮಾನು ಹೊರಡಿಸಿವೆ.

ಪೆಟ್ರೋಲ್ ಮತ್ತು ಡೀಸೆಲ್ ಕಾರುಗಳ ಮೇಲಿನ ನಿಷೇಧವನ್ನು ಜಾರಿಗೆ ತರುವುದಕ್ಕೆ ಪೂರ್ವಭಾವಿಯಾಗಿ ಚೀನಾ ಸರ್ಕಾರ, ಈಗಾಗಲೆ ವಿದ್ಯುತ್ ಅಥವಾ ಬ್ಯಾಟರಿ ಚಾಲಿತ ಕಾರುಗಳ ಉತ್ಪಾದನೆಗೆ ಹಲವು ಪ್ರೋತ್ಸಾಹ ಕ್ರಮಗಳನ್ನು ಪ್ರಕಟಿಸಿದೆ. ಈ ಹಿನ್ನೆಲೆಯಲ್ಲಿ ಹಲವು ವಿದೇಶೀ ಕಾರು ಉತ್ಪಾದನಾ ಕಂಪೆನಿಗಳು ಚೀನಾದ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಜರ್ಮನಿಯ ಅಟೊದೈತ್ಯ ಫೋಕ್ಸ್‌ವ್ಯಾಗನ್ ಇದರಲ್ಲಿ ಮುಂಚೂಣಿಯಲ್ಲಿದೆ. 2025ರೊಳಗೆ ವರ್ಷಕ್ಕೆ 10 ಲಕ್ಷ ಎಲೆಕ್ಟ್ರಿಕ್ ಕಾರುಗಳನ್ನು

